(ಇಂದು ದಿನಾಂಕಃ 23–01–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು **1** ನೇ ಪ್ರತಿವಾದಿ ಪರ ಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ ಃ--

1) ಸಾಕ್ಷಿಗೆ ಈಗ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿರುವ ವಿಷಯಗಳು ಓದಲು ಬರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಅಲ್ಪ ಸ್ವಲ್ಪ ಓದಲು ಬರುತ್ತದೆ ಆದರೆ ಅದರಲ್ಲಿರುವ ವಿಷಯಗಳನ್ನು ನಾನು ತಿಳಿದು ಸಹಿಯನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಇಂದು ನ್ಯಾಯಾಲಯಕ್ಕೆ ಸ್ವತಃ ಬಂದಿರುತ್ತೇನೆ. ಮರಡ್ಡಿ ರವರಲ್ಲಿ ಹಿರಿಯ ಮಗನಾದ ಮಾರುತೆಪ್ಪ ರವರು ನ್ಯಾಯಾಲಯದ ಎದುರು ಇರುತ್ತಾರೆ. ಅವರ ಸಂಗಡ ನಾನು ಬಂದಿರುತ್ತೇನೆ ಎಂದರೆ ಸಾಕ್ಷಿಯು ಅವರು ಬಂದಿರುತ್ತಾರೆ ನಾನು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

2) ಹನುಮಂತಪ್ಪ ಬಸಾಪುರ ರವರು ಅಣ್ಣಿಗೇರಿಯ ನಿವಾಸಿ. ಸದರಿಯವರ ಮನೆ ಈಗ ಅಣ್ಣಿಗೇರಿಯ ಸಿದ್ಧರಾಮೇಶ್ವರ ಶಾಲೆಯ ಬಳಿ ಇರುತ್ತದೆ.

3) ವಾದಿ ಎಂದರೆ ಸೀತವ್ವ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಸರ್ವೆ ಸಂಖ್ಯೆ, ಚಕಬಂದಿ ಮತ್ತು ಕ್ಷೇತ್ರ ಹೇಳಲು ಬರುವುದಿಲ್ಲ.

4) ಯಲ್ಲಪ್ಪ ಹನುಮಂತಪ್ಪ ಮರಡ್ಡಿ ರವರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ. ದಾವಾ ಯಾವ ಕಾರಣಕ್ಕೆ ಸಲ್ಲಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅವರು ವಹಿವಾಟಿನಲ್ಲಿರುತ್ತಾರೆ ಎಂದು ನುಡಿಯುತ್ತಾರೆ.

5) ನನಗೆ ಸೇರಿದ ಆಸ್ತಿಯ ಸರ್ವೆ ಸಂಖ್ಯೆ ಮತ್ತು ಚಕಬಂದಿ ಹೇಳಲು ಬರುವುದಿಲ್ಲ. ಅದು ಒಟ್ಟು 07 ಎಕ್ರೆ ವಿಸ್ತೀರ್ಣ ಇರುತ್ತದೆ. ದಾವಾ ಆಸ್ತಿಯ ಹತ್ತಿರ ನೀರಿನ ಟ್ಯಾಂಕಗೆ ಸಾರ್ವಜನಿಕರು ಮತ್ತು ರೈತರು ತಮ್ಮ ದಿನನಿತ್ಯದ ನೀರಿನ ಅವಶ್ಯಕತೆಗೆ ಬರುತ್ತಾರೆ ಎಂದರೆ ಸರಿ. ಅದೇ ರೀತಿ ವಾದಿಯರು ಸಹ ತಮ್ಮ ದನಕರುಗಳನ್ನು ಸದರಿ ಟ್ಯಾಂಕಿನ ಬಳಿ ದಿನನಿತ್ಯ ಕರೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಆದಕಾರಣ ವಾದಿಯರ ಪರಿಚಯ ನನಗೆ ಆಗಿರುತ್ತದೆ ಎಂದರೆ ಸರಿ. ಸದರಿ ಪರಿಚಯದ ಆದಾರದ ಮೇಲೆ ಅವರಿಗೆ ಸಹಾಯವಾಗಲಿ ಎಂದು ನಾನು ನ್ಯಾಯಾಲಯದ ಎದುರು ಸುಳ್ಳು ಸಂಗತಿಗಳ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಸ್ತುಸ್ಥಿತಿ ಮತ್ತು ಪ್ರತಿವಾದಿ ಯಾರು ಎಂದರೆ ಸಾಕ್ಷಿಯು ಪ್ರತಿವಾದಿಯು ಸೀತವ್ವ ಎಂದು ನುಡಿಯುತ್ತಾರೆ. ಕಬ್ಜಾ ವಹಿವಾಟಿಗೆ ಹರಕತ್ತು ಯಾವ ದಿನದಂದು ಮಾಡಿರುತ್ತಾರೆಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ನಡೆದಿರುತ್ತದೆ.

7) ಸೀತವ್ವ ರವರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇದ್ದು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯರು ಕಬ್ಜಾ ವಹಿವಾಟಿನಲ್ಲಿರುತ್ತಾರೆ ಎಂದು ನುಡಿಯುತ್ತಾರೆ.

**2** ನೇ ಪ್ರತಿವಾದಿ ಗೈರು ಹಾಜರಿದ್ದು ಯಾವುದೇ ಪ್ರತಿನಿಧಿ ಇಲ್ಲದೇ ಇದ್ದ ಕಾರಣ **2** ನೇ ಪ್ರತಿವಾದಿ ಪರ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು**.**

*ಮರು ವಿಚಾರಣೆ ಃ ಇಲ್ಲಾ.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**